


ಹೊರಟಿತು ಇಲಿಮರಿ ನೀರನು ತರಲು






# ಹೊರಟಿತು ಇಲಿಮರಿ ನೀರನು ತರಲು

## ಲಿಥುವೇನಿಯನ್ ಜಾನಪದ ಗೀತೆಗಳು

ಚಿತ್ರಗಳು: ತತ್ಯಾನ ಬಲ್ಜ್ಬನೆನೆ
ಅನುವಾದ: ಗೋಪಾಲಕೃಷ್ಣರಾವ್



# ಹೊರಟಿತು ಇಲಿಮರಿ ನೀರನು ತರಲು

ಹಿಟ್ಟನು ಬೇಗನೆ ಕಲಸು
ಮಿದಿಯುತ ಬೇಗನೆ ಬೆರಸು –
ಹೊರಟಿತು ಇಲಿಮರಿ ನೀರನು ತರಲು !
ಹತ್ತಿತು ಇಲಿಮರಿ ಸೇತುವೆಯ
ದಾಟಿತು ಮರಳಿನ ದಂಡೆಯನೂ.
ನೋಡಿತು ಅತ್ತ ನೋಡಿತು ಇತ್ತ
ಬಾವಿಯೆ ಇಲ್ಲ – ಬೆದರಿತು ಇಲಿಮರಿ !
ಇದ್ದಿತು ಬಾವಿ ಕಣಜದ ಬಳಿಯೆ !












# ವಿಯ್, ಕಂದು ಮೊಲವೆ

ವಿಯ್, ಕಂದು ಮೊಲವೆ, ತೊಲಗು ಇಲ್ಲಿಂದ – ಗೊತ್ತ !
ಬರಬೇಡ ನನ ಹಿಂದೆ ದಿನವಿಡೀ – ಗೊತ್ತ !
ಬೇಲಿಯಲಿ ತೂರಿ ನೀ ಬರಬೇಡ – ಗೊತ್ತ !
ತಿನಬೇಡ ನನ ಕೋಸು ಕ್ಯಾರಟ್ಟುಗಳ – ಗೊತ್ತ !
ಸಿಗಬೇಡ ನನ ಕೈಗೆ – ಗೊತ್ತ !
ಓಡೋಡು ನಾ ನಿನ್ನ ಹಿಡಿಯುವಾ ಮುನ್ನ – ಗೊತ್ತ !









# ಅಂಬಾ, ಅಂಬಾ, ನಾನೊಂದು ಕರು

ಅಂಬಾ, ಅಂಬಾ, ನಾನೊಂದು ಕರು.
ಅಂಬಾ, ಅಂಬಾ, ನನಗಿದೆ ಉದ್ದದ ಬಾಲ.
ಅಂಬಾ, ಅಂಬಾ, ನನ್ನದು ಟನ್ನಿನ ತೂಕ.
ಅಂಬಾ, ಅಂಬಾ, ನನ್ನಯ ಅಂಗಳದಿಂದ
ಅಂಬಾ, ಅಂಬಾ, ನೀನೀಗಲೆ ಓಡುವುದೊಳಿತು.
ಅಂಬಾ, ಅಂಬಾ, ಗುಮ್ಮುವೆ, ಇಲ್ಲದೆ ಹೋದರೆ !







# ಕಾಡುಕೋಳಿ ಕಟ್ಟಿತೊಂದು ಮನೆಯ

ಕಾಡುಕೋಳಿ ಕಾಡುಕೋಳಿ
ಕಟ್ಟಿತೊಂದು ಮನೆಯ.
ಹಸುರು ಹುಲ್ಲು ಬನದಲಿ
ಗುಡ್ಡದಾ ತುದಿಯಲಿ.

ಚಾಪ್ – ಚಾಪ್ – ಚಾಪ್, ಚಾಪ್ – ಚಾಪ್ – ಚಾಪ್
ಕೊಡಲಿ ಬೀಸಿ ಮರವ ಕಡಿದು
ಕಟ್ಟಿತೊಂದು ಮನೆಯ.
ಹೂವು ಮುಡಿಸಿ ಉಡುಪು ತೊಡಿಸಿ
ಕರೆತಂದಿತು ಅಲ್ಲಿಗೆ
ತನ್ನಯ ನಿಜ ನಲ್ಲೆಯ.







МЫШКУ ПО ВОДУ ПОСЛАЛИ

**Литовские народные песенки**

*на языке каннада*

ಪ್ರಗತಿ ಪ್ರಕಾಶನ
ಮಾಸ್ಕೋ

© ಕನ್ನಡ ಭಾಷಾಂತರ ಪ್ರಗತಿ ಪ್ರಕಾಶನ, 1982

М $\frac{70801-287}{016(01)-81}$ 603-82

4803000000